# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ವಲಯ ದಕ್ಷಿಣ

### ಜಯನಗರ ಪೂರ್ವ, ವಾರ್ಡ್ ಸಂಖ್ಯೆ: 170

### ದಿನಾಂಕ: 04.12..2020 ರಂದು ವಾರ್ಡ್ ಸಂ: 170 ಜಯನಗರ ಪೂರ್ವದಲ್ಲಿ ನಡೆದ ವಾರ್ಡ್ ಸಭೆ:

## ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀಮತಿ ಸಂಧ್ಯಾರಾಣಿ | ಅಧ್ಯಕ್ಷರು |
| 02 | ಶ್ರೀ ಸಂತೋಷ್ ಕುಮಾರ್.ಬಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ. ಲೋಕೇಶ್.ಎಸ್ | ಹಿರಿಯ ಆರೋಗ್ಯ ಪರೀವಿಕ್ಷರು |
| 04 | ಶ್ರೀ ಪ್ರಕಾಶ್ | ಕಂದಾಯ ಪರೀವಿಕ್ಷಕರು |
| 05 | ಶ್ರೀ ಮಧು ಎಂ.ಎ | ಜಲ ಮಪಾಕರು, ಬೆಂಗಳೂರು ಜಲಮಂಡಳಿ |
| 06 | ಶ್ರೀ. ಗೌತಮ್.ವೈ | ಕಿರಿಯ ಆರೋಗ್ಯ ಪರೀವಿಕ್ಷಕರು |
| 07 | ಶ್ರೀ  ದೇವಾಸಗಾಯಂ | ಕೆಲಸ ಪರೀವಿಕ್ಷಕರು |
| 08 | ಶ್ರೀ ಝಾಕೀರ್ | ಸ್ಥಳೀಯಾ ನಾಗರೀಕ |
| 09 | ಶ್ರೀ ಶಿವಕುಮಾರ್ | ಬೀದಿ ದೀಪ ನಿರ್ವಾಹಕರು |
| 10 | ಶ್ರೀ ಎಸ್. ಸೂಮಶೇಕರ್ | ಸ್ಥಳೀಯಾ ನಾಗರೀಕ |
| 11 | ಶ್ರೀ ಅಶೋಕ್ ಕುಮಾರ್ ವೈ.ಎನ್ | ಸ್ಥಳೀಯಾ ನಾಗರೀಕ |
| 12 | ಶ್ರೀ ಕೆ.ಮನೋಹರ್ | ಸ್ಥಳೀಯಾ ನಾಗರೀಕ |
| 13 | ಶ್ರೀ ವಿ.ಲಕ್ಷ್ಮಣ | ಸ್ಥಳೀಯಾ ನಾಗರೀಕ |
| 14 | ಶ್ರೀ ಮುನೀರ್ ಖಾನ್ | ಸ್ಥಳೀಯಾ ನಾಗರೀಕ |
| 15 | ಶ್ರೀ ಶಿವ ಕುಮಾರ್ | ಮಾರ್ಷಲ್ |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ 21.11.2020 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2) ಶ್ರೀ ಝಾಕೀರ್ ರವರು ಮಾತನಾಡುತ್ತ, ಪುಟ್ಟಯ್ಯನಪಾಳ್ಯ ಪ್ರದೇಶದಲ್ಲಿ ಒಳಚರಂಡಿ ಪೈಪ್‌ಗಳಲ್ಲಿ ಸಿಲ್ಟ್ ತುಂಬಿಕೊಂಡಿದ್ದು, ಡಿ-ಸಿಲ್ಟ್ ಮಾಡಿಸಲು ಕೋರಿರುತ್ತಾರೆ, ಮತ್ತು ಈ ಪ್ರದೇಶದಲ್ಲೇ ಕುಡಿಯುವ ನೀರಿನ ಸಮಸ್ಯೆ ಇರುವುದಾಗಿ ತಿಳಿಸಿರುತ್ತಾರೆ. (ಕ್ರಮ ಸಹಾಯಕ ಅಭಿಯಂತರರು-ಜಲಮಂಡಳಿ).

3) ಶ್ರೀ ಅಶೋಕ್ ರವರು ಮಾತಾನಾಡುತ್ತ , 26ನೇ ಮುಖ್ಯರಸ್ತೆ ಎಂ.ಕೆ.ಅಹಮದ್ ಬಜಾರ್ ಮುಂಭಾಗ ರಸ್ತೆ ಗುಂಡಿ ಇರುವುದಾಗಿ ತಿಳಿಸಿರುತ್ತಾರೆ (ಕ್ರಮ ಸಹಾಯಕ ಅಭಿಯಂತರರು- ರಸ್ತೆ ಮೂಲಭೂತ ಸೌಕರ್ಯ) ಹಾಗೂ ವಾರ್ಡ್‌ನಲ್ಲಿ ಇನ್ನಿತರೆ ಪ್ರದೇಶದಲ್ಲಿ ರಸ್ತೆ ಗುಂಡಿ ಕಂಡು ಬಂದಲ್ಲಿ ಅದನ್ನು ಮುಚ್ಚಲು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ. (ಕ್ರಮ ಸಹಾಯಕ ಅಭಿಯಂತರರು- ಕಾಮಗಾರಿ ಇಲಾಖೆ).

4) ಶ್ರೀ ಝಾಕೀರ್ ರವರು ಮಾತನಾಡುತ್ತಾ ಈಸ್ಟ್ ಎಂಡ್ "ಸಿ" ಅಡ್ಡರಸ್ತೆಯಲ್ಲಿ ಹೊಸದಾಗಿ ಒಳಚರಂಡಿ ಪೈಪ್‌ಗಳನ್ನು ಅಳವಡಿಸುವಂತೆ ಕೋರುತ್ತಾರೆ. (ಕ್ರಮ ಸಹಾಯಕ ಅಭಿಯಂತರರು- ಜಲಮಂಡಳ).

5) ಶ್ರೀ ಅಶೋಕ್ ರವರು ಮಾತನಾಡುತ್ತ ಕೋವಿಡ್-19 ಗೆ ತುತ್ತಾಗುವ ವ್ಯಕ್ತಿಗಳಿಗೆ ಒದಗಿಸುವ ಆಸ್ಪತ್ರೆಯ ಬಗ್ಗೆ ಮಾಹಿತಿ ಕೋರಿದರು. (ಕ್ರಮ : ಹಿರಿಯ ಆರೋಗ್ಯ ಪರೀವಿಕ್ಷ ಇದಲ್ಲದೆ, 9ನೇ ಬ್ಲಾಕ್ ಮಾರ್ಕೆಟ್‌ನಲ್ಲಿ , ವ್ಯಾಪಾರಿಗಳು ಸಾಮಜಿಕ ಅಂತರ ಪಾಲಿಸದೇ ವ್ಯಾಪರ ಮಾಡುತ್ತತ್ತಾರೆ, ಹಾಗೂ ರಸ್ತೆ ಮತ್ತು ಪಾದಚಾರಿ ಮಾರ್ಗವನ್ನು ಕಬಳಿಸಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ರಸ್ತೆಯಲ್ಲಿ ಪಾದಚಾರಿಗಳೀಗೆ ತೊಂದರೆಯಾಗುತ್ತಿರುವ ಬಗ್ಗೆ ವಿವರಿಸಿದರು. (ಕ್ರಮ: ಹಿರಿಯ ಆರೋಗ್ಯ ಪರೀವಿಕ್ಷರು, ಸಹಾಯಕ ಅಭಿಯಂತರರು ಮತ್ತು ಪೋಲೀಸ್ ಇಲಾಖೆ).

6) ಶ್ರೀ ಶ್ರೀನಿವಾಸ್ರವರು ರವರು ಮಾತನಾಡಿ ಅರಸು ಕಾಲೋನಿ, 9ನೇ ಬ್ಲಾಕ್ ಮತ್ತು ಮಸೀದಿ ಹತ್ತಿರ ಹೈ ಮಾಸ್ಟ್‌ನ 01 ದೀಪಗಳು ಕಾರ್ಯಾನಿರ್ವಹಿಸುತ್ತಿಲ್ಲ ಇದನ್ನು ರೀಪೇರಿ ಮಾಡಿಸಿಕೊಡುವಂತೆ ಕೋರಿರುತ್ತಾರೆ (ಕ್ರಮ ಸಹಾಯಕ ಅಭಿಯಂತರರು-ವಿದ್ಯುತ್, ದಕ್ಷಿಣ).

7) ಶ್ರೀ ಉಮಾಶಂಕರ್ ರವರು ಮಾತಾನಾಡುತ್ತ ಈಸ್ಟ್ ಎಂಡ್ ಮುಖ್ಯರಸ್ತೆಯಲ್ಲುವ ಅಮರಾವತಿ ಹೋಟೇಲ್ ಮುಂಭಾಗ ಇರುವ ಅನಧಿಕೃತ ನಿರ್ಮಾಣವನ್ನು ತೆರೆವುಗೊಳಿಸುವಂತೆ ಕೋರಿರುತ್ತಾರೆ. (ಕ್ರಮ ಸಹಾಯಕ ಅಭಿಯಂತರರು-ಕಾಮಗಾರಿ ಇಲಾಖೆ).

8) ಶ್ರೀ ಶ್ರೀನಿವಾಸ್ ರವರು ಮಾತಾನಾಡುತ್ತ ಬಿಲಾಲ್ ಮಸೀದಿ ಹತ್ತಿರ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸಿದ್ದು , ಹಳೆಯ ಕಂಬಗಳನ್ನು ತೆರೆವುಗೂಳಿಸಲು ಕೋರಿರುತ್ತಾರೆ. (ಕ್ರಮ ಸಹಾಯಕ ಅಭಿಯಂತರರು- ಬೆಸ್ಕಾಂ).

9) ಶ್ರೀ ಮನೋಹರ್ ರವರು ಮಾತಾನಾಡುತ್ತಾ ಎನ್.ಎ.ಎಲ್ ಲೇಔಟ್ 1ನೇ ಮುಖ್ಯರಸ್ತೆ ಯಲ್ಲಿ ಒಂದು ಬೀದಿ ದೀಪವನ್ನು ಅಳವಡಿಸಲು ಕೋರಿರುತ್ತಾರೆ. (ಕ್ರಮ: ಸಹಾಯಕ ಅಭಿಯಂತರರು- ವಿದ್ಯುತ್, ದಕ್ಷಿಣ).

10) ಮಾನ್ಯ ಆಯುಕ್ತರು, ನೀಡಿದ್ದ ಸೂಚನೆಯಂತೆ ಸಭೆಯಲ್ಲಿದ್ದ ಸಾರ್ವಜನಿಕರನ್ನು ಸಾರ್ವಜನಿಕ ಶೌಚಾಲಯದ ಬಗ್ಗೆ ಕೇಳಲಾಗಿ, ಪುಟ್ಟಯ್ಯಪಾಳ್ಯ ಮತ್ತು ಅರಸು ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯವು ತೀರ ಕೆಟ್ಟ ಪರಿಸ್ಥಿತಿಯಲ್ಲಿದ್ದು ದುರಸ್ಥಿ ಮಾಡಿಸಿಕೊಡುವಂತೆ ಕೋರಿರುತ್ತಾರೆ.

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು, ಹಾಗೂ ಮುಂದಿನ ಸಭೆಗೆ ಮಾನ್ಯ ಶಾಸಕರು , ಜಯನಗರ ವಿಧಾನ ಸಭಾ ಕ್ಷೇತ್ರ ಮತ್ತು ಸಹಾ ಕಂಧಾಯ ಅಧಿಕಾರಿ (ಮಾರುಕಟ್ಟೆ) ಇವರುಗಳನ್ನು ಸಭೆಗೆ ಅಹ್ವಾನಿಸಲು ಮಾನ್ಯ ಅದ್ಯಕ್ಷರು ತಿಳಿಸಿದರು, ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 19.12.2020ರಂದು ಬೆಳ್ಳಗೆ 10.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

Kumar B 4'Dec

**ಕಾರ್ಯದರ್ಶಿ ಮತ್ತು ಸಂಚಾಲಕರು**
**ಹೆಸರು: ಸಂತೋಷ್ ಕುಮಾರ್.ಬಿ**
**ಸಹಾಯಕ ಅಭಿಯಂತರರು**